ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಸೋಮವಾರಪೇಟೆ
ಸಿ.ಸಿ. ನಂ. 452 /2024

| | | |
|---|---|---|
| ಹೆಸರು | : ಕಾಂತರಾಜು | ಪಿಡಬ್ಲ್ಯೂ-4 |
| ತಂದೆಯ ಹೆಸರು | : ಕುರಿಬೊಮ್ಮಯ್ಯ | ಸಿಡಬ್ಲ್ಯೂ-3 |
| ವಯಸ್ಸು | : 34 ವರ್ಷ | |
| ವೃತ್ತಿ | : ಅಬಕಾರಿ ಪೇದೆ | |
| ವಾಸ ಸ್ಥಳ | : ಕುಶಾಲನಗರ | |

ದಿಃ06.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅಭಿಯೋಜಕರಿಂದ:

2022 ರಿಂದ ಆಗಸ್ಟ 2025 ವರೆಗೆ ಸೋಮವಾರಪೇಟೆ ಅಬಕಾರಿ ಪೊಲೀಸ್ ಠಾಣೆಯಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ**06-04-2024** ರಂದು ನಾನು ಚಾಸಾ **1** ಮತ್ತು **2** ರವರೊಂದಿಗೆ ಇಲಾಖಾ ವಾಹನದಲ್ಲಿ ಕುಂಬಾರಗಡಿಗೆ ಗ್ರಾಮದ ವಾಪ್ತಿಯಲ್ಲಿ ಲೋಕಸಭಾ ಚುನಾವಣ ಪ್ರಯುಕ್ತ ನೀತಿ ಸಂಹಿತೆ ಜಾರಿಯಲ್ಲಿದ್ದ ಸಮಯದಲ್ಲಿ ಮಾನ್ಯ ಅಬಕಾರಿ ಜಂಟಿ ಆಯುಕ್ತರು ಹಾಗೂ ಉಪ ಆಯುಕ್ತರು ಕೊಡಗು ಜಿಲ್ಲೆ ರವರು ನಿರ್ದೇಶನದಂತೆ, ಸುಮಾರು ಬೆಳಿಗ್ಗೆ **5.15** ಗಂಟೆಗೆ ಕಚೇರಿಯಿಂದ ಹೊರಟು ಈಚಲಬೀಡು ಶನಿವಾರಸಂತೆ ಮಾರ್ಗವಾಗಿ ಸುಮಾರು **25** ಕಿಲೋ ಮೀಟರ್ ಕ್ರಮಿಸಿ ಕುಂಬಾರಗಡಿಗೆ ಗ್ರಾಮದಲ್ಲಿ ಗಸ್ತು ಮಾಡುತ್ತಿದ್ದ ಸಮಯದಲ್ಲಿ ಅಪರಿಚಿತ ವ್ಯಕ್ತಿಯೊಬ್ಬರು ನಮ್ಮ ವಾಹದ ಬಳಿ ಬಂದು ಚಾಸಾ-**2** ರವರಿಗೆ ಕಿರುಬಿಳಹ ಗ್ರಾಮದ ನಿವಾಸಿಯಾದ ಕುಶಾಲ ಯಾನೆ ಸುದೀಪ್ ಬಿನ್ ಪರಮೇಶ ಎಂಬಾತನು ಅಕ್ರಮವಾಗಿ ಕಳ್ಳಬಟ್ಟಿ ತಯಾರಿಸಿ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ನೀಡಿದ್ದು ಸದರಿ ಮಾಹಿತಿಯನ್ನು ಚಾಸಾ-**2** ರವರು ಲಿಖಿತವಾಗಿ ದೂರನ್ನು ನೀಡಿ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಲು ಕೋರಿಕೊಂಡ ಮೇರೆಗೆ ಕೂಡಲೇ ಸ್ಥಳದಿಂದ ಸಿಬ್ಬಂದಿಗಳೊಂದಿಗೆ ಮಾಹಿತಿ ಇರುವ ಸ್ಥಳಕ್ಕೆ ಹೋದಾಗ ಮನೆಯ ಬಳಿ ದ್ವಿಚಕ್ರ ವಾಹನ ನಿಲ್ಲಿಸಿದ್ದು, ವಾಹನದ ಬಳಿ ಒಬ್ಬ ವ್ಯಕ್ತಿ

ಕೈಯಲ್ಲಿ ಕ್ಯಾನ್ ಹಿಡಿದುಕೊಂಡು ನಿಂತಿದ್ದು, ನಮ್ಮನ್ನು ಕಂಡು ಕಾಫಿ ತೋಟದ ಮದ್ಯ ಓಡಿ ಹೋಗಿದ್ದು, ಸಿಬ್ಬಂದಿಗಳು ಆತನನ್ನು ಬೆನ್ನಟ್ಟಿ ಹಿಡಿದು ತಡೆದು ನಿಲ್ಲಿಸಲು ಪ್ರಯತ್ನಿಸಲಾಗಿ ಸಾಧ್ಯವಾಗಲಿಲ್ಲ. ವಾಹನದ ಬಳಿ ಬಂದು ನೋಡಲಾಗಿ ಸುಮಾರು **10** ಕೆಜಿ ಸಾಮರ್ಥ್ಯದ ಕಪ್ಪು ಬಣ್ಣದ ಪ್ಲಾಸ್ಟಿಕ್ ಕೈ ಚೀಲದಲ್ಲಿ **2** ಲೀ. ಗಾತ್ರದ ಪ್ಲಾಸ್ಟಿಕ್ **2** ಹಸಿರುಬಣ್ಣದ ಬಾಟಲಿ ಇದ್ದು, ಅದರಲ್ಲಿ **4** ಲೀ ಕಳ್ಳಬಟ್ಟಿ ಸಾರಾಯಿ ಇರುತ್ತದೆ. ಸದರಿ ಸೀಸೆಗಳನ್ನು ದ್ವಿ ಚಕ್ರ ವಾಹನದ ಬಲ ಭಾಗದಲ್ಲಿರುವ ಹುಕ್ ಹಾಗೂ ಕ್ಯಾರಿಯರ್ ಗೆ ಮಾಸಿದ ಹಳದಿ ಬಣ್ಣದ ಹಗ್ಗದಲ್ಲಿ ಕಟ್ಟಲಾಗಿತ್ತು. ಚಾಸಾ-**1** ರವರು ಸದರಿ ವಾಹನವನ್ನು ಶೋಧನೆ ನಡೆಸಲು ನ್ಯಾಯಾಲಯದಲ್ಲಿ ವಾರೆಂಟ್ ಪಡೆಯಲು ಕಾಲಾವಕಾಶ ಇಲ್ಲದ ಪ್ರಯುಕ್ತ ಹಾಗೂ ಅಕ್ಕ ಪಕ್ಕದಲ್ಲಿ ಪಂಚರಿಗೆ ಪ್ರಯತ್ನಿಸಲಾಗಿ ಯಾರು ದೊರೆಯದ ಕಾರಣ ಸ್ಥಳದಲ್ಲಿ ಶೊಧನಾ ವಾರೆಂಟ್ ತಯಾರಿಸಿ ಇಲಾಖಾ ಸಿಬ್ಬಂದಿಗಳಾದ ನಮ್ಮನ್ನು ಪಂಚರನ್ನಾಗಿ ಮಾಡಿಕೊಂಡು ಶೋಧನೆ ಮಾಡಲಾಗಿ ವಾಹನದ ಸಂಖ್ಯೆ: ಕೆಎ.**09**.ಕೆ.**5443** ಆಗಿದ್ದು, ಹಿರೋ ಹೊಂಡಾ ಕಂಪನಿ ತಯಾರಿತ ದ್ವಿಚಕ್ರ ವಾಹನವಾಗಿರುತ್ತದೆ. ಸದರಿ ದೊರೆತ **2** ಲೀ. ಪ್ಲಾಸಿಕ್ ಸೀಸೆಯಲ್ಲಿ ಕಳ್ಳಬಟಿಯಿದ್ದು ಒಟ್ಟು **4** ಲೀ. ಕಳ್ಳಬಟ್ಟಿ ಸಾರಾಯಿ ಇರುತ್ತದೆ. ಮನೆಯ ಬಳಿ ನೋಡಲಾಗಿ ಮನೆಯ ಮುಂಬಾಗಿಲಿಗೆ ಬೀಗ ಹಾಕಲಾಗಿದ್ದು, ಮನೆಯ ಸುತ್ತ ಮುತ್ತ ಹುಡುಕಲಾಗಿ ಕಾಫಿ ತೋಟದ ಗಿಡಗಳ ಮಧ್ಯ ಇರುವ ಮರದ ಬುಡದಲ್ಲಿ ಸುಮಾರು **20** ಲೀ. ಗಾತ್ರದ **2** ಹಸಿರು ಬಣ್ಣದ ಬಿಂದಿಗೆಗಳು ಹಾಗೂ ಸುಮಾರು **20** ಲೀ. ಗಾತ್ರದ ಹಳದಿ ಬಣ್ಣದ ಒಂದು ಬಿಂದಿಗೆ ಇದ್ದು, ಒಟ್ಟು **60** ಲೀ. ಬೆಲ್ಲದ ಕೊಳೆ ಪತ್ತೆಯಾಗಿರುತ್ತದೆ. ದೊರತೆ ಕಳ್ಳಬಟ್ಟಿ ಸರಾಯಿಯಿಂದ ತಲಾ **180** ಮಿಲಿಯ ಎರಡು ಸೀಸೆಯಲ್ಲಿ ಹಾಗೂ ದೊರೆತ ಬೆಲ್ಲದ ಕೊಲೆಯಿಂದ ತಲಾ **180** ಮಿಲಿಯಂತೆ **3** ಸೀಸೆಗಳಲ್ಲಿ ಮಾದರಿಗಾಗಿ ತೆಗೆಯಲಾಯಿತು. ಅವುಗಳ ಬಾಯಿಗೆ ಬಟ್ಟೆ ಸುತ್ತಿ ದಾರದಿಂದ ಕಟ್ಟಿ ಅರಗಿನ ಸಹಾಯದಿಂದ ಸೀಲು ಮಾಡಲಾಯಿತು. ದೊರೆತ ಕಳ್ಳಬಟ್ಟಿ ಸರಾಯಿಯನ್ನು ವಶಕ್ಕೆ ಪಡೆದು ಉಳಿದ ಬೆಲ್ಲದ ಕೊಲೆಯನ್ನು ಸಾಗಾಟ

ಮಾಡಲು ಅನಾನುಕೂಲವಾಗಿರುವುದರಿಂದ ಮೇಲಾಧಿಕಾರಿಗಳ ಅನುಮತಿ ಪಡೆದು ಸ್ಥಳದಲ್ಲಿ ನಾಶಪಡಿಸಲಾಯಿತು. ದ್ವಿ ಚಕ್ರ ವಾಹನವನ್ನು ಅಲ್ಲಿ ದೊರೆತ ಬೇರೆ ವಸ್ತುಗಳನ್ನು ಸಹ ಇಲಾಖಾ ವಶಕ್ಕೆ ಪಡೆದು ಸದರಿ ಮಹಜರ್ ಕ್ರಮ ಜರುಗಿಸಲಾಯಿತು. ಮಹಜರ್ ಅನ್ನು ಬೆಳಿಗ್ಗೆ **10.20** ರಿಂದ **11.15** ರವರೆಗೆ ಜರುಗಿಸಿರುತ್ತೇನೆ. ಚಾಸಾ-**2** ರವರು ವಾಹವನ್ನು ಚಲಾಯಿಸಿಕೊಂಡು ಕಚೇರಿಗೆ ತಂದಿರುತ್ತೇನೆ, ನಂತರ ಸ್ಥಳದಲ್ಲಿ ಶೋಧನಾ ಸಮುಚಿತ ವಾರೆಂಟ್ ಅನ್ನು ಈಗಾಗಲೇ ನಿಪಿ-**5** ಎಂದು ಸಾಕ್ಷಿಯ ಸಹಿಯನ್ನು ನಿಪಿ-**5**(ಸಿ)ಎಂದು, ಮಾದರಿ ಮೊಹರನ್ನು ಈಗಾಗಲೇ ನಿಪಿ-**6** ಸಾಕ್ಷಿಯ ಸಹಿಯನ್ನು ನಿಪಿ-**6**(ಸಿ)ಎಂದು ಗುರುತಿಸಲಾಯಿತು. ಸ್ಥಳದಲ್ಲಿ ತೆಗೆದಿರುವಂತಹ ಫೋಟೋಗಳನ್ನು ಸಾಕ್ಷಿಯು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-**7** ರಿಂದ **9** ಎಂದು ಗುರುತಿಸಲಾಯಿತು. ಮಹಜರನ್ನು ಈಗಾಗಲೇ ನಿಪಿ-**4** ಸಹಿಯನ್ನು ನಿಪಿ-**4**(ಸಿ)ಎಂದು ಸಾಕ್ಷಿಯ ಸಹಿಯನ್ನು ಗುರುತಿಸಲಾಗಿರುತ್ತದೆ.

ನ್ಯಾಯಾಲಯದ ಮುಂದೆ ಇರುವ **2** ಕಳ್ಳಬಟ್ಟಿ ಸರಾಯಿಯ ಮಾದರಿಗಳನ್ನು ಮುಮಾ **1** ಎಂದು, **3** ಬೆಲ್ಲದ ಪುಳಗಂಜಿ ಬಾಟಲಿಯನ್ನು ಮುಮಾ **2** ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಶ್ರೀ ಕೆ.ಹೆಚ್.ವಿ ವಕೀಲರಿಂದ:</u>

ನಾನು ಸ್ಥಳಕ್ಕೆ ಹೋಗಿದ್ದೆ ಎನ್ನುವ ಸಂದರ್ಬದಲ್ಲಿ ಸಾರ್ವಜನಿಕರು ಯಾರು ಇರುವುದಿಲ್ಲ, ಅಕ್ಕ-ಪಕ್ಕದಲ್ಲಿ **5-6** ಮನೆಗಳು ಇದ್ದವು, ಸದರಿ ಮನೆಯವರನ್ನು ಮೇಲಾಐ,ಕಾರಿಗಳು ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿ, ಕಳ್ಳಬಟ್ಟಿ ಎಂದು ತೀರ್ಮಾನವನ್ನು ಯಾವ ಆಧಾರದ ಮೇಲೆ ಬಂದೇವು ಎಂದರೆ ನನಗೆ ಗೊತ್ತಿಲ್ಲ, ವಾಹನ ಮನೆ ಮತ್ತು ಜಾಗ ಆರೋಪಿಗೆ ಸೇರಿದೆ ಎಂಬುದರ ಬಗ್ಗೆ ಯಾವುದೇ ವಿಚಾರಣೆ ಮಾಡಿರುವುದಿಲ್ಲ, ಮೇಲಾಐ,ಕಾರಿಗಳು

ಮೀಟರ್ ನಂಬರ್, ಮನೆ ನಂಬರ್ ಗಳನ್ನು ಮಹಜರಿನಲ್ಲಿ ನಮೂದಿಸಿರುವುದಿಲ್ಲ, ನಾವು ಯಾವುದೇ ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ದಾಳಿ ಮಾಡಿರುವುದಿಲ್ಲ ಎದರೆ ಸರಿಯಲ್ಲ, ಹಾಗೂ ಕಳ್ಳಬಟ್ಟಿಯನ್ನು ಆರೋಪಿ ಇಟ್ಟುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ, ನಾವು ಹೇಳಿದ ಸ್ಥಳದಲ್ಲಿ ಯಾವುದೇ ಮಹಜರು ನಡೆದಿಲ್ಲ ಎಂದರೆ ಸರಿಯಲ್ಲ, ವಹಜರು ಪ್ರಕ್ರಿಯೇಯ ಮೂಲಕ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಲ್ಲ ಎಂದರೆ ಸರಿಯಲ್ಲ, ಹಾಗೂ ಯಾವುದೇ ಮಾದರಿಯನ್ನು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ, ನಾವು ಆರೋಪಿಸಿರುವಂತೆ ಸದರಿ ಸ್ಥಳದಲ್ಲಿ ಯಾವುದೇ ಮೊಹರನ್ನು ತಯಾರು ಮಾಡಿಲ್ಲ ಎಂದರೆ ಸರಿಯಲ್ಲ, ಸ್ಥಳದಲ್ಲಿ ಪರಿಕರಗಳನ್ನು ವಶಪಡಿಸಿಕೊಂಡಿರುತ್ತೇವೆ ಎಂದರೆ ಸರಿ, ನಾವು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತಹ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ, ಮುದ್ದೆಮಾಲುಗಳನ್ನು ಮತ್ತು ಪೋಟೋಗಳನ್ನು ಈ ಕೇಸಿಕೋಸ್ಕರ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸರಿ ಇದೆ.

sd/-

ಪ್ರ.ಸಿ.ಜೆ.ಮತ್ತು ಪ್ರ.ದ.ನ್ಯಾ .ದಂ

ಸೋಮವಾರಪೇಟೆ